# IN THE COURT OF THE ADDL. SENIOR CIVIL JUDGE & JMFC., GUBBI

# **OS – 208/2024**

Witness present and duly sworn on : 11.09.2025.

Cross Examination: by Counsel for Defendant No.1. :

ವಾದಿ ಕಮಲಮ್ಮ ನನ್ನ ತಾಯಿ. ಅವರು ಓಡಾಡಿಕೊಂಡು ಆರಾಮಾಗಿ ಇದ್ದಾರೆ ಎಂದರೆ ಹುಷಾರಿಲ್ಲದೆ ಇದ್ದ ಕಾರಣ ನಾನು ಬಂದಿದ್ದೇನೆ. ನನ್ನ ತಾಯಿಗೆ ಪಿಡ್ಸ ಕಾಯಿಲೆ ಇದೆ. ನನ್ನ ತಾಯಿಗೆ ಯಾವುದೇ ಕಾಯಿಲೆ ಇಲ್ಲದೆ ಇದ್ದರು ಸಹ ನಾನು ಸುಳ್ಳು ಮಾಹಿತಿ ಕೊಟ್ಟು ಅಧಿಕಾರ ಪತ್ರವನ್ನು ಹಾಜರುಪಡಿಸಿದ್ದೇನೆಂದರೆ ಸರಿಯಲ್ಲ. ನನ್ನ ತಾಯಿಗೆ ಚಿಕಿತ್ಸೆ ಕೊಡಿಸುವ ಬಗ್ಗೆ ನನ್ನ ಹತ್ತಿರ ದಾಖಲೆ ಇದೆ. ನನ್ನ ಹತ್ತಿರ ನನ್ನ ತಾಯಿಯ ಚಿಕಿತ್ಸೆ ಕೊಡಿಸಿರುವ ದಾಖಲೆ ಇಲ್ಲದೆ ಇರುವ ಕಾರಣ ಅದನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.

ಗುಂಡೀರಪ್ಪನವರಿಗೆ ಗುಂಡಿರಯ್ಯ ಮತ್ತು ಪಾತಯ್ಯ ಎಂಬ ಇಬ್ಬರು ಮಕ್ಕಳು ಎಂದರೆ ಸರಿ. ನಾನು ಮೂಲಪುರುಷ ಗುಂಡೀರಪ್ಪರವನ್ನು ನೋಡಿಲ್ಲಮತ್ತು ಅವರು ಯಾವಾಗ ಮರಣ ಹೊಂದಿದರು ಎಂದು ನನಗೆ ಗೊತ್ತಿಲ್ಲ. ಗುಂಡೀರಪ್ಪನವರ ಮಕ್ಕಳಾದ ಗುಂಡೀರಯ್ಯ ನವರು ಯಾವಾಗ ಮರಣ ಹೊಂದಿದರು ಎಂದು ನನಗೆ ಗೊತ್ತಿಲ್ಲ. ಪಾತಯ್ಯ ರವರು 2006-07 ರಲ್ಲಿ ಮರಣ ಹೊಂದಿರುತ್ತಾರೆ. ನಾನು 2001 ರಲ್ಲಿ ಜನಿಸಿರುತ್ತೇನೆ. ಗುಂಡೀರಯ್ಯ, ಪಾತಯ್ಯ ಹಾಗೂ 1 ನೇ ಪ್ರತಿವಾದಿಯ ಗಂಡನಾದ ಚಿತ್ತಯ್ಯ ರವರ ನಡುವೆ ಆಗಿರುವ ವ್ಯವಹಾರಗಳು ನನ್ನ ಜನನದ ಪೂರ್ವದಲ್ಲಿ ಆಗಿರುವ ಕಾರಣ ನನಗೆ ಗೊತ್ತಿಲ್ಲ ಎಂದರೆ ಸರಿ. ಸದರಿ ಚಿತ್ತಯ್ಯರವರನ್ನು ಪೂಜಾರಿ ಚಿತ್ತಯ್ಯ ಎಂದು ಕರೆಯುತ್ತಾರೆಂದರೆ ನನಗೆ ಗೊತ್ತಿಲ್ಲ.

ದಾವೆಯನ್ನು ಸರ್ವೆ ನಂ.13/5 (ಹಳೇ ಸರ್ವೆ ನಂ.13/1) ಜಮೀನಿಗೆ ಸಲ್ಲಿಸಿರುತ್ತೇವೆ. ಸರ್ವೆ ನಂ.13/1 ಒಟ್ಟು ವಿಸ್ತೀರ್ಣ 13 ಎಕರೆ 31 ಗುಂಟೆ. 13 ಎಕರೆ 31 ಗುಂಟೆ ಪೈಕಿ ಪೂರ್ವ ದಿಕ್ಕಿನ 6 ಎಕರೆ 31 ಗುಂಟೆಯನ್ನು ಗುಂಡೀರಯ್ಯ ಮತ್ತು ಪಾತಯ್ಯನವರು ದಿನಾಂಕಃ 20.06.1978 ರಂದು 1 ನೇ ಪ್ರತಿವಾದಿಯ ಗಂಡನಾದ ಚಿತ್ತಯ್ಯ

ರವರಿಗೆ ಮಾರಾಟ ಮಾಡಿದ್ದಾರೆಂದರೆ ಸರಿ. ಸದರಿ ದಿನದಿಂದ ಚಿತ್ತಯ್ಯನವರು 6 ಎಕರೆ 31 ಗುಂಟೆ ಜಮೀನಿನ ಸ್ವಾಧೀನದಲ್ಲಿ ಇದ್ದರು ಎಂದರೆ ಸರಿ. ಸದರಿ ಚಿತ್ತಯ್ಯ ರವರಿಗೆ ಲಕ್ಷ್ಮಮ್ಮ, ಚಿತ್ತಮ್ಮ, ಶಾಂತಮ್ಮ ಮತ್ತು ಚಿತ್ತಯ್ಯ ಎಂಬ ಮಕ್ಕಳು ಎಂದರೆ ನನಗೆ ಗೊತ್ತಿಲ್ಲ. ಈಗ ದಾವಾ ಆಸ್ತಿಯಲ್ಲಿ 1 ನೇ ಪ್ರತಿವಾದಿ ಹಾಗೂ ಆಕೆಯ ಮಕ್ಕಳು ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸರಿ.

ನನ್ನ ತಾಯಿಯ ಜನ್ಮ ದಿನಾಂಕ ನನಗೆ ಗೊತ್ತಿಲ್ಲ ಅವರಿಗೆ ಸುಮಾರು 40 ವರ್ಷ ವಯಸ್ಸು . ನನ್ನ ತಾಯಿ 1978 ನಂತರ ಜನಿಸಿದ್ದಾರೆಂದರೆ ಸರಿ. ದಾವಾ ಆಸ್ತಿಯ ಪಶ್ಚಿಮಕ್ಕೆ ಕ್ಯಾತಮ್ಮ ಎಂದರೆ ಸರಿ. ಸದರಿ ಕ್ಯಾತಮ್ಮ ರವರ ಗಂಡನ ಹೆಸರು ನನಗೆ ಗೊತ್ತಿಲ್ಲ. ಕಾತ್ಯಮ್ಮ ರವರ ಗಂಡನ ಹೆಸರು ಈರಮ್ಮ ಎಂದರೆ ನನಗೆ ಗೊತ್ತಿಲ್ಲ. 6 ಎಕರೆ 31 ಗುಂಟೆಯ ಪಶ್ಚಿಮಕ್ಕೆ ಇದ್ದ 7 ಎಕರೆ ಜಮೀನನ್ನು ಈರಣ್ಣ ಬಿನ್ ?ನಾಗಲಯ್ಯ ರವರಿಗೆ ಗುಂಡೀರಯ್ಯನವರು ಮಾರಾಟ ಮಾಡಿದ್ದರು ಎಂದರೆ ಸರಿಯಲ್ಲ. ಈ ದಾವೆಯನ್ನು ಸಲ್ಲಿಸುವಾಗ ದಾವೆಯಲ್ಲಿ ದಾವಾ ಆಸ್ತಿಯ ಪಶ್ಚಿಮಕ್ಕೆ ಕ್ಯಾತಮ್ಮ ಎಂದು ಬರೆಸಿದ್ದಾರೆಂದರೆ ಸರಿ. ನಾನು ಹಾಜರುಪಡಿಸಿರುವ ಪಹಣಿಯಲ್ಲಿ ಕ್ಯಾತಮ್ಮ ರವರ ಹೆಸರಿಗೆ 7 ಎಕರೆ ಇದೆಯಾ ಎಂದರೆ ಸರಿ.

ಸರ್ವೆ ನಂ.13/1 ರಲ್ಲಿ 2 ಪೋಡಿಗಳು ಆಗಿದ್ದು ಅವುಗಳು ಸರ್ವೆ ನಂ.13/1 ಮತ್ತು ಸರ್ವೆ ನಂ.13/5 ಎಂದರೆ ಸರಿ. ಈರಣ್ಣ ರವರು ಖರೀದಿ ಮಾಡಿದ್ದ 7 ಎಕರೆಗೆ ಸರ್ವೆ ನಂ.13/1 ಮತ್ತು ಶಿವಮ್ಮ ರವರ ಆಸ್ತಿಗೆ ಸರ್ವೆ ನಂ.13/5 ಪೋಡಿಯಾಗಿದೆ ಎಂದರೆ ಸರಿ. ಕಂದಾಯ ದಾಖಲೆಗಳ ಕಾಲಂ ನಂ.12 ರಲ್ಲಿ ನಮೂದು ಆಗಿರುವ ಹೆಸರು ಚಿತ್ತಯ್ಯ 1 ನೇ ಪ್ರತಿವಾದಿ ಶಿವಮ್ಮ ರವರ ಗಂಡ ಎಂದರೆ ನನಗೆ ಗೊತ್ತಿಲ್ಲ. ನಾನು ಈ ದಾವೆಯಲ್ಲಿ ಹಾಜರುಪಡಿಸಿರುವ ದಾಖಲೆಗಳನ್ನು ಹೊರತುಪಡಿಸಿ ದಾವಾ ಆಸ್ತಿಯ ಬೇರೆ ದಾಖಲೆಗಳನ್ನು ನೋಡಿದ್ದಿರಾ ಎಂದರೆ ನೋಡಿರುವುದಿಲ್ಲ. ಆದ ಕಾರಣ ಹಳೆ ಕಂದಾಯ ದಾಖಲೆಗಳ ಕಾಲಂ ನಂ.12 ರಲ್ಲಿ ಯಾರ ಹೆಸರು ಬರುತ್ತಿತ್ತು ಎಂದರೆ ಗುಂಡೀರಯ್ಯ ಮತ್ತು ಈರಮ್ಮ ರವರ ಹೆಸರುಗಳು ಬರುತ್ತಿತ್ತು. ಕಂದಾಯ ಅಧಿಕಾರಿಗಳು ಕೈ ತಪ್ಪಿನಿಂದ ಕ್ರಯಪತ್ರದ ಆಧಾರದ ಮೇಲೆ ಚಿತ್ತಯ್ಯನವರ ಹೆಸರನ್ನು ಸೇರಿಸದೆ ಗುಂಡಿರಯ್ಯರವರ ಹೆಸರನ್ನು ಬರೆದಿದ್ದರು ಎಂದರೆ ನನಗೆ ಗೊತ್ತಿಲ್ಲ. 1978 ರಿಂದ 2022-23 ತನಕ ಕಂದಾಯ ದಾಖಲೆಗಳ ಕಾಲಂ ನಂ.12 ರಲ್ಲಿ ಚಿತ್ತಯ್ಯ ರವರ ಹೆಸರು ಬರುತ್ತಿದ್ದ ಕಾರಣ ಸದರಿ ದಾಖಲೆಗಳನ್ನು ನಾನು

ನ್ಯಾಯಾಲಯದಲ್ಲಿ ಹಾಜರುಪಡಿಸಿಲ್ಲ ಎಂದರೆ ನನಗೆ ಗೊತ್ತಿಲ್ಲ. ಚಿತ್ತಯ್ಯನವರ ಹೆಸರು ಕಾಲಂ ನಂ.9 ರಲ್ಲಿ ಬರದೆ ಇದ್ದ ಕಾರಣ ಶಿವಮ್ಮ ರವರು ಅವರ ಹೆಸರನ್ನು ಸೇರಿಸಲು ಎ.ಸಿ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿದರು ಎಂದರೆ ಮೋಸದಿಂದ ಮಾಡಿರುತ್ತಾರೆ. ಸದರಿ ಅರ್ಜಿಯ ವಿಚಾರಣೆಯ ನಂತರ ಉಪವಿಭಾಗಾಧಿಕಾರಿಯು ಸರ್ವೆ ನಂ.13/1 ರಲ್ಲಿ 6 ಎಕರೆ 31 ಗುಂಟೆಗೆ 1 ನೇ ಪ್ರತಿವಾದಿ ಶಿವಮ್ಮ ರವರ ಹೆಸರನ್ನು ತೋರಿಸಬೇಕು ಎಂದು ಆದೇಶ ಮಾಡಿರುತ್ತಾರೆಂದರೆ ನನಗೆ ಗೊತ್ತಿಲ್ಲ.

2 ನೇ ಪ್ರತಿವಾದಿ ಈರಮ್ಮ ಮತ್ತು ವಾದಿ ಕಮಲಮ್ಮ ಒಟ್ಟಿಗೆ ವಾಸ ಇದ್ದಾರೆ ಎಂದರೆ ಸರಿಯಲ್ಲ. 2 ನೇ ಪ್ರತಿವಾದಿ ಈರಮ್ಮ ನವರು ಅವರ ಗಂಡನ ಮನೆಯಲ್ಲಿ ಹಾಗೂ ವಾದಿ ಕಮಲಮ್ಮ ನವರು ಅವರ ಗಂಡನ ಮನೆಯಲ್ಲಿ ವಾಸ ಇದ್ದಾರೆ. 2 ನೇ ಪ್ರತಿವಾದಿ ಮತ್ತು ವಾದಿಯು ತಾಯಿ ಮಗಳು ಆಗಿರುವ ಕಾರಣ ವಿಶ್ವಾಸದಿಂದ ಇದ್ದಾರೆ ಎಂದರೆ ಸರಿ. ವಾದಿ ಕಮಲಮ್ಮ ಮತ್ತು 2 ನೇ ಪ್ರತಿವಾದಿ ಈರಮ್ಮ ಸೇರಿ 1 ನೇ ಪ್ರತಿವಾದಿಯ ವಿರುದ್ದ ದಾವೆ ಹೂಡಿದ್ದಾರೆಂದರೆ ಸರಿ. ಉಪವಿಭಾಗಧಿಕಾರಿಯ ಆದೇಶವನ್ನು 2 ನೇ ಪ್ರತಿವಾದಿಯು ಜಿಲ್ಲಾಧಿಕಾರಿಯ ಮುಂದೆ ಮೇಲ್ಮನವಿ ಸಂಖ್ಯೆ 238/2022 ಸಲ್ಲಿಸಿದ್ದಾರೆಂದರೆ ಸರಿ. ಉಪವಿಭಾಗದಿಕಾರಿಯ ಆದೇಶ ಸರಿ ಇದೆ ಎಂದು ಜಿಲ್ಲಾಧಿಕಾರಿಯು RP No.238/2022 ವಜಾ ಮಾಡಿದ್ದಾರೆಂದರೆ ನನಗೆ ಗೊತ್ತಿಲ್ಲ.

ವಾದಿ ಮತ್ತು 2 ನೇ ಪ್ರತಿವಾದಿ ಸೇರಿ ದಿನಾಂಕಃ 14.09.2022 ರಂದು ವಿಭಾಗ ಆಗಿದೆ ಎಂದು ಪಾಲುಪಟ್ಟಿ ಸೃಷ್ಟಿಸಿದ್ದಾರೆಂದರೆ ಸರಿಯಲ್ಲ. ಸದರಿ ಪಾಲುಪಟ್ಟಿ ಸೃಷ್ಟಿಸಿ 1 ನೇ ಪ್ರತಿವಾದಿಗೆ ಸೇರಿರುವ 6 ಎಕರೆ 31 ಗುಂಟೆ ಪೈಕಿ 3 ಎಕರೆ 15.08 ಗುಂಟೆ ಜಮೀನಿಗೆ ದಾವೆ ಸಲ್ಲಿಸಿದ್ದೇವೆಂದರೆ ಸರಿಯಲ್ಲ. 1 ನೇ ಪ್ರತಿವಾದಿ ಸೇರಿರುವ 6 ಎಕರೆ 31 ಗುಂಟೆಯಲ್ಲಿ ಯಾವುದೇ ಹಕ್ಕು ಇಲ್ಲದೆ ಇದ್ದರು ಸಹ ವಾದಿ ಮತ್ತು 2 ನೇ ಪ್ರತಿವಾದಿ ಪಾಲುಪಟ್ಟಿಯನ್ನು ಸೃಷ್ಟಿಸಿ ನನ್ನ ತಾಯಿ ಸುಳ್ಳು ದಾವೆ ಸಲ್ಲಿಸಿದ್ದಾರೆಂದರೆ ಸರಿಯಲ್ಲ. ಈಗ ಸರ್ವೆ ನಂ.13/5 ರ 6 ಎಕರೆ 31 ಗುಂಟೆ ಖಾತೆಯು 1 ನೇ ಪ್ರತಿವಾದಿ ಶಿವಮ್ಮ ರವರ ಹೆಸರಿಗೆ ಬರುತ್ತಿದೆ ಎಂದರೆ ಸರಿ. ವಾದಿ ಮತ್ತು 2 ನೇ ಪ್ರತಿವಾದಿಗೆ ದಾವಾ ಆಸ್ತಿಯಲ್ಲಿ ಯಾವುದೇ ಹಕ್ಕು ಇರುವುದಿಲ್ಲ ಹಾಗೂ 1 ನೇ ಪ್ರತಿವಾದಿಯ ಜಮೀನನ್ನು ಕಬಳಿಸಲು ಸುಳ್ಳು ಚಕ್ಕುಬಂದಿ ತೋರಿಸಿ ಸುಳ್ಳು ದಾವೆ ಸಲ್ಲಿಸಿದ್ದೇವೆ ಎಂದರೆ ಸರಿಯಲ್ಲ.

**Cross Examination: by Counsel for Defendant No.2. :**

Counsel called out absent. Hence, taken as nil.

**Re examination - Nil**

(Typed to my dictation in open court)

R.O.I & A.C.

Addl. Senior Civil Judge and
JMFC., Gubbi